ದಿನಾಂಕ : 25/08/2016

## ಡಾ. ಬಿ. ಬಿ. ಹೆಗ್ಡೆ ಕಾಲೇಜು

## ಸ್ವಚ್ಛ ಕುಂದಾಪುರ ನಮ್ಮ ಕನಸು – ಸಂವಾದ



ಭಾರತಕ್ಕೆ ಅವಿಚ್ಛಿನ್ನವಾದ ಸಾಂಸ್ಕೃತಿಕ ಪರಂಪರೆಯಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಬದಲಾಗುತ್ತಿರುವ ಜೀವನ ಶೈಲಿ, ಕೊಳ್ಳುಬಾಕ ಸಂಸ್ಕೃತಿ, ಕೈಗಾರೀಕರಣ, ಪರಿಸರ ಮಾಲಿನ್ಯಕ್ಕೆ ಮುಖ್ಯ ಕಾರಣವಾಗುತ್ತಿದೆ ಎಂದು ಕುಂದಾಪುರ ಪುರಸಭೆಯ ಮುಖ್ಯಾಧಿಕಾರಿ ಶ್ರೀ ಗೋಪಾಲಕೃಷ್ಣ ಶೆಟ್ಟಿ ಹೇಳಿದರು. ಇದೇ ಸಂದರ್ಭದಲ್ಲಿ ಪ್ಲಾಸ್ಟಿಕ್ ನಿರ್ಮೂಲನೆ, ತ್ಯಾಜ್ಯ ನಿರ್ವಹಣೆ, ಸ್ವಚ್ಛ ಭಾರತ ಯೋಜನೆ, ಪೌರ ಕಾರ್ಮಿಕರ ಸಮಸ್ಯೆ ಮತ್ತು ಸವಾಲುಗಳು, ದೃಶ್ಯ ಮಾಲಿನ್ಯ ಈ ವಿಷಯದ ಕುರಿತು ವಿದ್ಯಾರ್ಥಿಗಳ ಜೊತೆ ಸಂವಾದ ನಡೆಸಿದರು. ತ್ಯಾಜ್ಯ ವಿಲೇವಾರಿ ಮಾಡಲು ನಾಗರಿಕರ ಸಹಕಾರ ಅನಿವಾರ್ಯ ಮತ್ತು ಸ್ವಚ್ಛ ಕುಂದಾಪುರಕ್ಕೆ ಯುವ ಜನತೆಯ ಪಾತ್ರ ಬಹುಮುಖ್ಯ ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಚೇತನ್ ಶೆಟ್ಟಿ ಕೋವಾಡಿ ಅಧ್ಯಕ್ಷತೆ ವಹಿಸಿದ್ದರು. ಎನವೈರ್ನಮೆಂಟ್ ಎಂಜಿನಿಯರ್ ಶ್ರೀ ಮದನ್ ನಾಯ್ಕು, ಪ್ರಭಾರ ಪ್ರಾಂಶುಪಾಲ ಶ್ರೀ ರಾಜೇಶ್ ಶೆಟ್ಟಿ ಉಪಸ್ಥಿತರಿದ್ದರು. ಎನ್.ಎಸ್.ಎಸ್. ಯೋಜನಾಧಿಕಾರಿ ಶ್ರೀ ರಕ್ಷಿತ್ ರಾವ್ ಗುಜ್ಜಾಡಿ ಸ್ವಾಗತಿಸಿದರು, ಸಹ ಯೋಜನಾಧಿಕಾರಿ ಕು. ಪ್ರೀತಿ ಹೆಗ್ಡೆ ವಂದಿಸಿದರು. ವಿದ್ಯಾರ್ಥಿನಿ ಪುಷ್ಪಲತಾ ಅತಿಥಿಗಳನ್ನು ಪರಿಚಯಿಸಿದರು. ವಿದ್ಯಾರ್ಥಿ ಲೋಕೇಶ್ ಕಾರ್ಯಕ್ರಮ ನಿರೂಪಿಸಿದರು.

Principal
Dr. B.B. Hegde First Grade College
Kundapura -576201

ದಿನಾಂಕ : 02.10.2017

ಗಾಂಧಿ ಕಂಡ ಭಾರತ : ವಿಶೇಷ ಉಪನ್ಯಾಸ




ಬುದ್ಧ, ಮಹಾವೀರ, ಪೈಗಂಬರ್, ಏಸು, ಬಸವ ಇಂತವರ ಚಿಂತನೆಯ ಮೂರ್ತರೂಪ ಗಾಂಧಿ. ಅಂಬೇಡ್ಕರ್ ಮತ್ತು ಗಾಂಧಿ ದೇಶ ಕಂಡ ಮತ್ತು ಮುಂದೂ ಕಾಣಬಹುದಾದ ಅಪ್ರತಿಮ ಎರಡು ಕಣ್ಣುಗಳು. ಯಾವ ಪ್ರಯತ್ನಗಳು ಈ ಎರಡು ರೂಪಕಗಳಿಗೆ ಪರ್ಯಾಯವಾಗಿ ಬರಲು ಸಾಧ್ಯವಿಲ್ಲ. ಈ ದೇಶದ ಅಂತಸತ್ವ ಅಹಿಂಸೆ. ಅಹಿಂಸೆಯ ರೂಪಕ ಗಾಂಧಿ. ಗಾಂಧಿ ಸತ್ಯವೇ ದೇವರೆಂದು ನಂಬಿದವರು ಹೊರತು ದೇವರೇ ಸತ್ಯ ಎಂದು ನಂಬಿದವರಲ್ಲ. ಹಾಗಾಗಿ ನಿರಂತರವಾಗಿ ಸತ್ಯದ ಹುಡುಕಾಟದಲ್ಲಿ ತೊಡಗಿದರು. ಗಾಂಧಿ ಸಂಕೇತವಾಗಬಾರದು, ಸಾತ್ವಿಕ ಧೈರ್ಯವಾಗಿ ನಮ್ಮೆದುರು ನಿಲ್ಲಬೇಕು. ಮನುಕುಲವನ್ನು ಪ್ರೀತಿಸಿದರೆ ಗಾಂಧಿಯನ್ನು ಪ್ರೀತಿಸಿದಂತೆ. ಗಾಂಧಿ ಕಂಡ ಸಾಮರಸ್ಯದ ಬದುಕು ನಮ್ಮದಾಗಬೇಕು ಎಂದು ತೆಂಕನಿಡಿಯೂರಿನ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಡಾ. ಜಯಪ್ರಕಾಶ ಶೆಟ್ಟಿ ಹೆಚ್. ಹೇಳಿದರು.

ಅವರು ಗಾಂಧಿ ಜಯಂತಿಯ ಪ್ರಯುಕ್ತ ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನಾ ಘಟಕದ ಆಶ್ರಯದಲ್ಲಿ 'ಗಾಂಧಿ ಕಂಡ ಭಾರತ' ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.

ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ದೋಮ ಚಂದ್ರಶೇಖರ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಗಾಂಧಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದರಲ್ಲಿ ನಾವು ಸೋತಿದ್ದೇವೆ. ದೇಶವನ್ನು ಕಾಡುತ್ತಿರುವ ಬಹುದೊಡ್ಡ ಸಮಸ್ಯೆ ಪ್ರಾಮಾಣಿಕತೆ. ವಿದ್ಯಾರ್ಥಿಗಳು ಪ್ರಾಮಾಣಿಕತೆಯನ್ನು ಮೈಗೂಡಿಸಿಕೊಳ್ಳಿ ಎಂದರು. ಉಪಪ್ರಾಂಶುಪಾಲರಾದ ಶ್ರೀ ಚೇತನ್ ಶೆಟ್ಟಿ ಕೋವಾಡಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಎನ್.ಎಸ್.ಎಸ್. ಯೋಜನಾಧಿಕಾರಿ ಶ್ರೀ ಸತೀಶ್ ಶೆಟ್ಟಿ ಹೆಸ್ಕತ್ತೂರು ಉಪಸ್ಥಿತರಿದ್ದರು. ವಿದ್ಯಾರ್ಥಿ ಲೋಕೇಶ್ ಸ್ವಾಗತಿಸಿದರು. ಪುಷ್ಪರಾಣಿ ಅತಿಥಿಗಳನ್ನು ಪರಿಚಯಿಸಿದರು. ಮಹೇಶ್ ಕೊಠಾರಿ ವಂದಿಸಿದರು. ಪ್ರಗತಿ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

Principal
Dr. B.B. Hegde First Grade College
Kundapura -576201

ದಿನಾಂಕ : ೨೬/೦೯/೨೦೧೮

**ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜು, ಕುಂದಾಪುರ**

**ಪಠ್ಯದಿಂದ ಮಾತ್ರ ಪ್ರಜ್ಞಾವಂತಿಕೆ ಸಾಧ್ಯವಿಲ್ಲ**

**- ಟಿ. ಬಿ. ಶೆಟ್ಟಿ**



ಕುಂದಾಪುರ : ಕೇವಲ ಪುಸ್ತಕದ ಓದಿನಿಂದ ನಾಗರಿಕ ಪ್ರಜ್ಞೆಯ ಬೆಳವಣಿಗೆ ಅಸಾಧ್ಯ. ದೇಶದ ಆಗು-ಹೋಗುಗಳ ತಿಳುವಳಿಕೆಯುಳ್ಳ ಜವಾಬ್ದಾರಿಯುತ ಪ್ರಜೆಗಳಿಂದ ಮಾತ್ರ ನಮ್ಮ ದೇಶ ಸಂಪದ್ಭರಿತವಾಗುವುದು ಎಂದು ಹಿರಿಯ ನ್ಯಾಯವಾದಿ ಟಿ. ಬಾಲಚಂದ್ರ ಶೆಟ್ಟಿ ಹೇಳಿದರು.

ಇಲ್ಲಿನ ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ಪ್ರಸಕ್ತ ಸಾಲಿನ ವಾರ್ಷಿಕ ಚಟುವಟಿಕೆಗಳನ್ನು ಉದ್ಘಾಟಿಸಿ ಮಾತನಾಡಿದರು. ತರಗತಿಯ ಓದಿನ ಜೊತೆಗೆ ಪಠ್ಯೇತರ ಚಟುವಟಿಕೆಗಳ ಭಾಗವಹಿಸುವಿಕೆಯಿಂದ ವಿದ್ಯಾರ್ಥಿಗಳ ವ್ಯಕ್ತಿತ್ವ ನಿರ್ಮಾಣ ಸಾಧ್ಯ ಎಂದರು.

ಅಧ್ಯಕ್ಷತೆ ವಹಿಸಿದ್ದ ಕುಂದಾಪುರ ಎಜ್ಯುಕೇಶನ್ ಸೊಸೈಟಿಯ ಅಧ್ಯಕ್ಷರಾದ ಬೈಂದೂರು ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಬಿ.ಎಂ. ಸುಕುಮಾರ ಶೆಟ್ಟಿ ಮಾತನಾಡಿ ಯುವಜನತೆ ಪಠ್ಯದ ಓದಿನ ಜೊತೆಗೆ ಸಮಾಜಮುಖಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತಾಗಬೇಕು ಎಂದರು. ಕಾರ್ಯಕ್ರಮದಲ್ಲಿ ಕಾಲೇಜಿನ ವಿವಿಧ ವೇದಿಕೆಗಳ ಸಂಯೋಜಕರು ಉಪಸ್ಥಿತರಿದ್ದರು.

ವಿದ್ಯಾರ್ಥಿನಿಯರಾದ ರೂಪಾ ಮತ್ತು ದೀಕ್ಷಾ ಪ್ರಾರ್ಥಿಸಿದರು. ಕಾಲೇಜು ಉಪಪ್ರಾಂಶುಪಾಲರಾದ ಶ್ರೀ ಚೇತನ್ ಕುಮಾರ್ ಶೆಟ್ಟಿ ಸ್ವಾಗತಿಸಿದರು. ಪ್ರಾಂಶುಪಾಲರಾದ ಪ್ರೊ. ದೋಮ ಚಂದ್ರಶೇಖರ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ವಾಣಿಜ್ಯಶಾಸ್ತ್ರ ಉಪನ್ಯಾಸಕಿ ಶ್ರೀಮತಿ ಅರ್ಚನಾ ಗದ್ದೆ ಅತಿಥಿಗಳನ್ನು ಪರಿಚಯಿಸಿ, ಉಪನ್ಯಾಸಕ ಶ್ರೀ ಯೋಗೀಶ್ ವಂದಿಸಿದರು. ಇಂಗ್ಲೀಷ್ ಉಪನ್ಯಾಸಕಿ ಕು. ಅಮೃತಾ ನಿರೂಪಿಸಿದರು.

Principal
Dr. B.B. Hegde First Grade College
Kundapura -576201

ದಿನಾಂಕ : 02.10.2018

ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜು, ಕುಂದಾಪುರ

'ಸುಖೀ ಸಮಾಜ ನಿರ್ಮಾಣ ಗಾಂಧಿಯ ಕನಸು'

– ಜನಾರ್ದನ ಮರವಂತೆ




ಕುಂದಾಪುರ : ಭಾರತದ ನೆಲದಲ್ಲಿ ಗಾಂಧಿಯ ಹೋರಾಟ ಕೇವಲ ಬ್ರಿಟೀಷರ ವಿರುದ್ಧದ ಸ್ವಾತಂತ್ರ್ಯಕ್ಕಾಗಿಯಲ್ಲ; ಆ ಸ್ವಾತಂತ್ರ್ಯದ ಮುಖೇನ ಅಸ್ಪೃಶ್ಯತೆ ರಹಿತ-ಅಸಮಾನತೆ ಮುಕ್ತ ಸುಖೀ ಸಮಾಜದ ನಿರ್ಮಾಣಕ್ಕಾಗಿ ಎಂದು ಪಂಚಾಯತ್‌ರಾಜ್ ತಜ್ಞ ಜನಾರ್ದನ ಮರವಂತೆ ಹೇಳಿದರು.

ಇವರು ಇಲ್ಲಿನ ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನಲ್ಲಿ ಗಾಂಧಿ ಜಯಂತಿ ಪ್ರಯುಕ್ತ 'ಗಾಂಧಿ ಕಂಡ ಗ್ರಾಮ ಸ್ವರಾಜ್ಯ' ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಗಾಂಧಿ ಓರ್ವ ಮಾನವೀಯ ಮೌಲ್ಯಗಳ ಪ್ರತಿಪಾದಕ. ಗಾಂಧಿಯ ಗ್ರಾಮ ಸ್ವರಾಜ್ಯದ ಪರಿಕಲ್ಪನೆ ವ್ಯಸನಮುಕ್ತ, ಭಯ ಮುಕ್ತ, ತಾರತಮ್ಯ ರಹಿತ, ಮೌಲ್ಯಾಧಾರಿತ, ಸಾಮರಸ್ಯದ ಸಮಾಜ ಕಟ್ಟುವುದನ್ನು ಆಧರಿಸಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ನಿರ್ದೇಶಕ ಪ್ರೊ. ದೋಮ ಚಂದ್ರಶೇಖರ್ ಮಾತನಾಡಿ, ಅಭಿವೃದ್ಧಿಯ ಪರಿಕಲ್ಪನೆ ಆರ್ಥಿಕ ಪ್ರಗತಿಗಿಂತ ಮಿಗಿಲಾಗಿ ನೈತಿಕ ಮೌಲ್ಯಗಳಲ್ಲಡಗಿದೆ. ಆಧುನಿಕ ಜಗತ್ತಿನಲ್ಲಿ ಮಾನವೀಯ ಮೌಲ್ಯಗಳ ಅಧಃಪತನಕ್ಕೆ ಗಾಂಧಿಯ ತತ್ವಾದರ್ಶಗಳು ಮೂಲೆಗುಂಪಾಗಿದ್ದೇ ಕಾರಣ. ಗಾಂಧಿ ಕೇವಲ ಒಂದು ಕಾಲಘಟ್ಟಕ್ಕೆ ಸೀಮಿತವಾದ ವ್ಯಕ್ತಿಯಲ್ಲ; ಅವರದ್ದು ಸರ್ವಕಾಲಕ್ಕೂ ಪ್ರಸ್ತುತವೆನಿಸುವ ವ್ಯಕ್ತಿತ್ವ ಎಂದರು. ವಾಣಿಜ್ಯ ವಿಭಾಗದ ಮುಖ್ಯಸ್ಥ ರಾಜೇಶ್ ಶೆಟ್ಟಿ ಉಪಸ್ಥಿತರಿದ್ದರು.

ವಿದ್ಯಾರ್ಥಿನಿಯರಾದ ಸುಜಾತ ಹಾಗೂ ದೀಕ್ಷಾ ಪ್ರಾರ್ಥಿಸಿದರು. ಕಾಲೇಜಿನ ಪ್ರಭಾರ ಪ್ರಾಂಶುಪಾಲ ಚೇತನ್ ಶೆಟ್ಟಿ ಕೋವಾಡಿ ಸ್ವಾಗತಿಸಿದರು. ವಾಣಿಜ್ಯ ಉಪನ್ಯಾಸಕ ಸತೀಶ್ ಕಾಂಚನ್ ಅತಿಥಿಗಳನ್ನು ಪರಿಚಯಿಸಿ, ತಿಲಕಲಕ್ಷ್ಮೀ ವಂದಿಸಿ. ನಂದಾ ರೈ ನಿರೂಪಿಸಿದರು.

Principal
Dr. B.B. Hegde First Grade College
Kundapura -576201

Date : 04/09/2019

# Dr. B. B. Hegde First Grade College, Kundapura

## Guest Lecture : "Communicative English"



**04 September, Kundapura :** *A student should not restrict himself to the four walls of the classroom and just scoring marks should not be his gaol. But in this competive world, it becomes a part of our life to have fluency in English as it is a Universal language said Prof. Johnson Jacob, Associate Professor, Cross land College, Brahmavar.*

*He was addressing the students during a Guest Lecture on "Communicative English" and also inaugurated the program organized by the Department of English at Dr. B. B. Hegde First College.*

*Principal of the college Prof. K. Umesh Shetty, President of the function stressed on the importance of conversing in English in their day to day life. Students coming from rural areas should not hesitate to speak in English, it is only then, that, they gain a hold over the language. Mr. Praveen Mogaveera Gangolli, Stdudent Welfare Officer was present on this occasion.*

*Mrs. Spoorthy S. Fernnades, H.O.D. of English welcomed the gathering and delivered the introductory remarks. Mrs. Deepika Raghavendra, Faculty in English proposed the vote of thanks. Ms. Amratha, Faculty in English compered the function.*

Principal
Dr. B.B. Hegde First Grade College
Kundapura -576201

# Dr. B. B. HEGDE FIRST GRADE COLLEGE, KUNDAPURA

[A Unit of Coondapur Education Society(R.), Kundapura]

## Alumni Association and Career Guidance & Placement Cell

Organise

A Talk on

## "How to face Interview"

(A programme under IQAC)

**Date :** 1st October, 2019 **Time :** 3.05 p.m.

**Venue:** College Auditorium

President : **Prof. Kothadi Umesh Shetty**
Principal

Resource Person : **Mr. Devaraj Poojary,** Alumnus
Accenture, Bangalore

Presence : **Mr. Chethan Shetty Kovadi,**
Vice Principal

: **Mr. Rajesh Shetty**
IQAC, Co-ordinator

: **Mr. Mahesh Babu,**
Placement Officer

# WELCOME

Mr. Mahesh Babu
Mr. Santhosh A. Shetty
**Programme Co-ordinators**

Prof. K.Umesh Shetty
**Principal**

Principal
Dr. B.B. Hegde First Grade College
Kundapura -576201

# ಮಾಹಿತಿ ಕಾರ್ಯಾಗಾರ



**ಕುಂದಾಪುರ:** ಕಾಲೇಜಿನ ವೃತ್ತಿ ಮಾರ್ಗದರ್ಶನ ತರಬೇತಿ ಘಟಕ ಹಾಗೂ ಹಳೆ ವಿದ್ಯಾರ್ಥಿ ಸಂಘದ ವತಿಯಿಂದ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಸಂದರ್ಶನದ ಸಮಯದಲ್ಲಿ ಯಾವೆಲ್ಲಾ ವಿಷಯಗಳನ್ನು ಗಮನಿಸಬೇಕೆಂದು ಮಾಹಿತಿ ಕಾರ್ಯಾಗಾರ ನಡೆಯಿತು.

ಎಕ್ಸೆಂಚರ್ ಕಂಪನಿಯ ಉದ್ಯೋಗಿ ಹಾಗೂ ಕಾಲೇಜಿನ ಹಳೆ ವಿದ್ಯಾರ್ಥಿಯಾಗಿರುವ ದೇವರಾಜ ಪೂಜಾರಿ ಕಾರ್ಯಕ್ರಮ ನಿರ್ವಹಿಸಿದರು. ಕಾಲೇಜಿನ ಪ್ರಿನ್ಸಿಪಾಲ್ ಪ್ರೊ. ಕೊತ್ತಾಡಿ ಉಮೇಶ್ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ವೈಸ್‌ಪ್ರಿನ್ಸಿಪಾಲ್ ಚೇತನ್ ಶೆಟ್ಟಿ ಕೋವಾಡಿ, ಸಂಯೋಜಕ ಹಾಗೂ ವಾಣಿಜ್ಯ ವಿಭಾಗದ ಮುಖ್ಯಸ್ಥ ರಾಜೇಶ್ ಶೆಟ್ಟಿ ವಕ್ವಾಡಿ, ವೃತ್ತಿ ಮಾರ್ಗದರ್ಶನ ಅಧಿಕಾರಿ ಮಹೇಶ್ ಬಾಬು, ಸಹ ಸಂಯೋಜಕ ಸಂತೋಷ್ ಎ. ಶೆಟ್ಟಿ ಉಪಸ್ಥಿತರಿದ್ದರು. ವಿದ್ಯಾರ್ಥಿಗಳಾದ ಸಂಕೇತ್ ಸ್ವಾಗತಿಸಿದರು. ಪ್ರೀತಿ ಕಾರ್ಯಕ್ರಮ ನಿರ್ವಹಿಸಿದರು. ರೂಪಶ್ರೀ ವಂದಿಸಿದರು.

Principal
Dr. B.B. Hegde First Grade College
Kundapura -576201







Principal
Dr. B.B. Hegde First Grade College
Kundapura -576201

# Dr. B. B. HEGDE FIRST GRADE COLLEGE, KUNDAPURA

[A Unit of Coondapur Education Society(R.), Kundapura]

## Department of Economics

Organises

Guest Lecture on

## "The Present Banking Scenario"

**(A programme under IQAC)**

**Date:** 10th October, 2019 **Time :** 3.05 P.M.

**Venue:** College Auditorium

- ✓ **President** : **Prof. K. Umesh Shetty**
  *Principal*
- ✓ **Resource Person** : **Sri Venkataramana Hegde**
  *President*
  *PTA*
- ✓ **Presence** : **Mr. Chethan Shetty Kovadi**
  *Vice-Principal*
  : **Mr. Rajesh Shetty**
  *Co-ordinator, IQA*

# WELCOME

*Mr. Sudhakar P*
*Ms. Jyothi Mogaveera*
*Mr. Manoj Kumar*
***Programme Co-ordinators***

Principal
Dr. B.B. Hegde First Grade College
Kundapura -576201

*Prof. K.Umesh Shetty*
***Principal***










Principal
Dr. B.B. Hegde First Grade College

# r. B. B. HEGDE FIRST GRADE COLLEGE, KUNDAPURA

[A Unit of Coondapur Education Society (R.), Kundapura]

## Career Guidance & Placement Cell

## Organise

## nterview Preparation & TCS NQT Registration Awareness"

## (A programme under IQAC)

**Date :** 02/01/2020 **Time :** 3.05 p.m.

**Venue:** College Auditorium

✓ *President* : **Prof. K. Umesh Shetty**
*Principal*

✓ *Resource Persons* : **Mr. Vighneshwara** *(Alumnus)*
*Process Associate*
*TCS, Bangalore*

✓ *Presence* : **Mr. Chethan Shetty Kovadi**
*Vice Principal*

**WELCOME**

Principal
Dr. B.B. Hegde First Grade College
Kundapura -576201

*Prof. K.Umesh Shetty*
**Principal**

*Mr. Mahesh Babu*
*Mr. Santhosh A. Shetty*
**Programme Co-ordinators**

ಪ್ರಜಾವಾಣಿ 6/1/2020



ಕುಂದಾಪುರದ ಡಾ.ಬಿ.ಬಿ.ಹೆಗ್ಡೆ ಕಾಲೇಜಿನ ವೃತ್ತಿ ಮಾರ್ಗದರ್ಶನ ತರಬೇತಿ ಘಟಕದ ಆಯೋಜನೆಯಲ್ಲಿ ನಡೆದ ಮಾಹಿತಿ ಕಾರ್ಯಾಗಾರದಲ್ಲಿ ವಿಘ್ನೇಶ್ವರ ಮಾಹಿತಿ ನೀಡಿದರು.

# ಡಾ.ಬಿ.ಬಿ.ಹೆಗ್ಡೆ ಕಾಲೇಜಿನಲ್ಲಿ ಮಾಹಿತಿ ಕಾರ್ಯಾಗಾರ

ಕುಂದಾಪುರ: ಇಲ್ಲಿನ ಡಾ.ಬಿ.ಬಿ.ಹೆಗ್ಡೆ ಕಾಲೇಜಿನ ವೃತ್ತಿ ಮಾರ್ಗದರ್ಶನ ತರಬೇತಿ ಘಟಕದ ಆಯೋಜನೆಯಲ್ಲಿ ಅಂತಿಮ ವರ್ಷದ ವಿದ್ಯಾರ್ಥಿಗಳಿಗಾಗಿ ಸಂದರ್ಶನ ತಯಾರಿ ಮತ್ತು ಟಿ.ಸಿ.ಎಸ್.ಎನ್.ಕ್ಯೂಟಿ ನೋಂದಣಿ ಕುರಿತು ಮಾಹಿತಿ ಕಾರ್ಯಾಗಾರ ನಡೆಯಿತು.

ಕಾಲೇಜಿನ ಪೂರ್ವ ವಿದ್ಯಾರ್ಥಿ ಬೆಂಗಳೂರು ಟಿ.ಸಿ.ಎಸ್. ಕಂಪನಿಯ ಪ್ರಕ್ರಿಯ ಸಹಾಯಕ ವಿಘ್ನೇಶ್ವರ ಮಾಹಿತಿ ನೀಡಿದರು. ಕಾಲೇಜಿನ ಪ್ರಾಂಶುಪಾಲ ಪ್ರೊ.ಕೊತ್ತಾಡಿ ಉಮೇಶ್ ಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಉಪ ಪ್ರಾಂಶುಪಾಲ ಚೇತನ್ ಶೆಟ್ಟಿ ಕೋವಾಡಿ, ವೃತ್ತಿ ಮಾರ್ಗದರ್ಶನ ಸಂಯೋಜಕ ಮಹೇಶ್ ಬಾಬು, ಸಹ ಸಂಯೋಜಕ ಸಂತೋಷ್ ಎ. ಶೆಟ್ಟಿ ಇದ್ದರು.

ಬಿ.ಕಾಂ. ವಿದ್ಯಾರ್ಥಿ ಮಹೇಶ್ ಕೊಠಾರಿ ಕಾರ್ಯಕ್ರಮ ನಿರೂಪಿಸಿದರು.

Principal
Dr. B.B. Hegde First Grade College
Kundapura -576201

# ಸಂದರ್ಶನ ತಯಾರಿ, ಟಿ.ಸಿ.ಎಸ್. ನೋಂದಣಿ: ಮಾಹಿತಿ ಕಾರ್ಯಾಗಾರ

ಉದಯವಾಣಿ 7/1/2020

ಕುಂದಾಪುರ, ಜ.6: ಡಾ| ಬಿ.ಬಿ. ಹೆಗ್ಡೆ ಕಾಲೇಜಿನ ವೃತ್ತಿ ಮಾರ್ಗದರ್ಶನ ತರಬೇತಿ ಘಟಕದ ಆಯೋಜನೆಯಲ್ಲಿ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಸಂದರ್ಶನ ತಯಾರಿ ಮತ್ತು ಟಿ.ಸಿ.ಎಸ್. ಎನ್. ಕ್ಯೂ.ಟಿ. ನೊಂದಣಿ ಕುರಿತು ಮಾಹಿತಿ ಕಾರ್ಯಾಗಾರ ನಡೆಯಿತು. ಕಾಲೇಜಿನ ಪೂರ್ವ ವಿದ್ಯಾರ್ಥಿ ಬೆಂಗಳೂರು ಟಿ.ಸಿ.ಎಸ್. ಕಂಪೆನಿಯ ಪ್ರಕ್ರಿಯ ಸಹಾಯಕ ವಿಘ್ನೇಶ್ವರ ಮಾಹಿತಿ ನೀಡಿದರು.

ಕಾಲೇಜಿನ ಪ್ರಾಂಶುಪಾಲ ಪ್ರೊ| ಕೊತ್ತಾಡಿ ಉಮೇಶ್ ಶೆಟ್ಟಿ ಪ್ರಸ್ತಾವಿಸಿದರು. ಉಪ ಪ್ರಾಂಶುಪಾಲ ಚೇತನ್ ಶೆಟ್ಟಿ ಕೋವಾಡಿ, ವೃತ್ತಿ ಮಾರ್ಗದರ್ಶನ ಸಂಯೋಜಕ ಮಹೇಶ್ ಬಾಬು, ಸಹ ಸಂಯೋಜಕ ಸಂತೋಷ್ ಎ. ಶೆಟ್ಟಿ ಉಪಸ್ಥಿತರಿದ್ದರು. ಅಂತಿಮ ಬಿ.ಕಾಂ. ವಿದ್ಯಾರ್ಥಿ ಮಹೇಶ್ ಕೊಠಾರಿ ನಿರೂಪಿಸಿದರು.




ಕಾರ್ಯಕ್ರಮದಲ್ಲಿ ಅತಿಥಿಗಳು ಮಾತನಾಡಿದರು.

# Dr. B. B. HEGDE FIRST GRADE COLLEGE, KUNDAPURA
[A Unit of Coondapur Education Society (R.), Kundapura]

## Department of Commerce & Management
Organises

Guest Lecture on

# Opportunities in Digital Marketing

(A programme under IQAC)

**Date :** 06-03-2020

**Time :** 2.30 p.m.

**Venue :** College Auditorium

- ✓ **Resource Persons** : ***Mr. Mayur Hatwar***
  *Founder*
  *Gyananda Training Institution, Mangalore*

  : ***Mr. Vadiraj K. Bhat***
  *Freelance consultant & trainer*

- ✓ ***President*** : ***Prof. K. Umesh Shetty***
  *Principal*

- ✓ ***Presence*** : ***Mr. Chethan Kumar Shetty***
  *Vice Principal*

# WELCOME

Mr. Rajesh Shetty
**Programme Co-ordinator**

Prof. K.Umesh Shetty
**Principal**

@@@@@@@@@@

Principal
Dr. B.B. Hegde First Grade College

▸ ಡಾ| ಬಿ.ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜು

# ಡಿಜಿಟಲ್ ಮಾರ್ಕೆಟಿಂಗ್‌ನಲ್ಲಿ ಉದ್ಯೋಗ: ಮಾಹಿತಿ




ಕುಂದಾಪುರ, ಮಾ. 7: ಇಲ್ಲಿನ ಡಾ| ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನಲ್ಲಿ ವಾಣಿಜ್ಯ ಮತ್ತು ನಿರ್ವಹಣಾ ಶಾಸ್ತ್ರ ವಿಭಾಗದ ಆಶ್ರಯದಲ್ಲಿ ಅಂತಿಮ ಪದವಿಯ ಬಿ.ಕಾಂ. ಹಾಗೂ ಬಿ.ಬಿ.ಎ. ವಿದ್ಯಾರ್ಥಿಗಳಿಗೆ 'ಡಿಜಿಟಲ್ ಮಾರ್ಕೆಟ್‌ನ ಅವಕಾಶಗಳ' ಕುರಿತು ಉಪನ್ಯಾಸ ಕಾರ್ಯಕ್ರಮ ಶುಕ್ರವಾರ ನಡೆಯಿತು.

ಹುಬ್ಬಳ್ಳಿ ಜ್ಞಾನ ಸಂಸ್ಥೆಯ ಸ್ಥಾಪಕ ಮಯೂರ ಪತ್ತಾರ್ ಅವರು, ಡಿಜಿಟಲ್ ಮಾರ್ಕೆಟಿಂಗ್‌ನಲ್ಲಿರುವ ಉದ್ಯೋಗ ಅವಕಾಶಗಳ ಮತ್ತು ಡಿಜಿಟಲ್ ಮಾರ್ಕೆಟ್‌ನ ಪ್ರಯೋಜನಗಳ ಕುರಿತಂತೆ ಮಾಹಿತಿ ನೀಡಿದರು.

ಕಾಲೇಜಿನ ಪ್ರಾಂಶುಪಾಲ ಪ್ರೊ| ಕೊತ್ತಾಡಿ ಉಮೇಶ್ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಕ್ರೆಡೆನ್ಸ್ ಸಲಹೆಗಾರ ಮತ್ತು ತರಬೇತುದಾರ ವರದರಾಜ್ ಕೆ. ಭಟ್, ಉಪ ಪ್ರಾಂಶುಪಾಲ ಚೇತನ್ ಶೆಟ್ಟಿ ಕೋವಾಡಿ ಉಪಸ್ಥಿತರಿದ್ದರು.

ವಾಣಿಜ್ಯ ಉಪನ್ಯಾಸಕ ಸಂತೋಷ್ ಎ. ಶೆಟ್ಟಿ ಸ್ವಾಗತಿಸಿ, ವಾಣಿಜ್ಯ ವಿಭಾಗದ ಮುಖ್ಯಸ್ಥ ರಾಜೇಶ್ ಶೆಟ್ಟಿ ವಕ್ವಾಡಿ ವಂದಿಸಿದರು. ಕಾರ್ಯಕ್ರಮ ನಿರೂಪಿಸಿದರು.

Principal
Dr. B.B. Hegde First Grade College
Kundapura -576201